# ಬೆಂಬಲ ಇದ್ದರೆ ಬೇಕಾದ್ದು ಸಾಧಿಸಬಹುದು

**ರಕ್ಷಾ ಹೊಳ್ಳ**
ಸ್ಟಾರ್ ಸುವರ್ಣ 'ಬಯಸದೆ ಬಳಿಬಂದೆ'ಯ ಕಾವ್ಯ



**◆ ರಕ್ಷಾಗೂ– ಕಾವ್ಯಾಗೂ ಏನಾದರೂ ಸಾಮ್ಯತೆ ಇದೆಯಾ?**

ಎರಡೂ ಬೇರೆಯ ವ್ಯಕ್ತಿತ್ವಗಳು ಹೋಲಿಕೆ ಒಂದಿಷ್ಟು ಬಂದರೂ ವ್ಯತ್ಯಾಸವೇ ಹೆಚ್ಚಿದೆ. ರಕ್ಷಾ ವಕೀಲೆ, ಮೃದು ಸ್ವಭಾವದ ಹುಡುಗಿ. ಅಷ್ಟೇ ದಿಟ್ಟತನ ಆಕೆಗೆ ಇದೆ. ರಕ್ಷಾ ಕೂಡ ಸ್ವಲ್ಪ ಹಾಗೆಯೇ ಇದ್ದರೂ ಮುಗ್ಧತೆ ಇದೆ. ಕಾವ್ಯಾ ಹಾಗಲ್ಲ, ನ್ಯಾಯ–ನೀತಿಯ ವಿಷಯ ಬಂದಾಗ ತುಂಬಾ ದೃಢವಾಗಿ ನ್ಯಾಯದ ಪರ ನಿಲ್ಲುತ್ತಾಳೆ. ಅನ್ಯಾಯದ ವಿರುದ್ಧ ಹೋರಾಡುತ್ತಾಳೆ. ತುಂಬಾ ವೃತ್ತಿಪರವಾಗಿ ಯೋಚಿಸುತ್ತಾಳೆ. ಕುಟುಂಬದ ವಿಷಯದಲ್ಲಿ ಮಾತ್ರ ಸಿಕ್ಕಾಪಟ್ಟೆ ಮೃದು. ಕುಟುಂಬಕ್ಕಾಗಿ ಎಂತಹ ತ್ಯಾಗವನ್ನು ಮಾಡಲು ಆಕೆ ಸಿದ್ಧ. ವೃತ್ತಿ ವಿಷಯಕ್ಕೆ ಬಂದಾಗ ತುಂಬಾ ಖಡಕ್ ಹುಡುಗಿ. ಅದು ಆಕೆಯ ಮತ್ತೊಂದು ಮುಖವನ್ನು ತೋರಿಸುತ್ತದೆ.

**◆ ಅಭಿನಯದ ಹಾದಿ ಆರಂಭವಾಗಿದ್ದು ಹೇಗೆ?**

ನಾನು ಮಾಡೆಲಿಂಗ್ ಮಾಡ್ತಾಯಿದ್ದೆ. ಆಗ ನಮ್ಮ ಡಿಸೈನರ್ ರಾಕೇಶ್ ಶೆಟ್ಟಿ ನೀವು ಆ್ಯಕ್ಟಿಂಗ್ ಮಾಡಬಹುದಲ್ಲ ಎಂದು ಒಮ್ಮೆ ಸಲಹೆಯನ್ನು ನೀಡಿದರು. ಹೌದಲ್ಲ, ಪ್ರಯತ್ನ ಮಾಡುವುದರಲ್ಲಿ ತಪ್ಪೇನಿಲ್ಲ ಎಂದು ಯೋಚಿಸಿ ಬಣ್ಣಕ್ಕೆ ಮುಖ ನೀಡಿದೆ. ನನ್ನ ವೃತ್ತಿ ಆರಂಭ ಆಗಿದ್ದೇ ಸುವರ್ಣದ 'ಪಲ್ಲವಿ ಅನುಪಲ್ಲವಿ'ಯ ಮೂಲಕ. ಇದಾದ ಮೇಲೆ ಅದೇ ಟೀವಿಯಲ್ಲಿ ಸುಮಾರು ಐದಾರು ವರ್ಷ ಕೆಲಸ ಮಾಡಿದೆ. ಆಮೇಲೆ ತಮಿಳು ಧಾರಾವಾಹಿಗೆ ಹೋದೆ. ಎರಡೂವರೆ ವರ್ಷದ ನಂತರ ಪುನಃ ಸ್ಟಾರ್ ಸುವರ್ಣಕ್ಕೆ ಮರುಪ್ರವೇಶ ಮಾಡುತ್ತಿದ್ದೇನೆ. ಇದು ನನಗೆ ಖುಷಿಯನ್ನು ಉಂಟುಮಾಡಿದೆ.

**◆ ಎಂತಹ ಪಾತ್ರಗಳು ನಿಮಗೆ ಇಷ್ಟ?**

ಅಳುಮುಂಜಿಗಿಂತ ಸವಾಲಿನ ಪಾತ್ರಗಳೇ ನನಗಿಷ್ಟ. ಕಥೆ ಕೇವಲ ಕಿಚನ್ ಡ್ರಾಮಕ್ಕೆ ಸೀಮಿತ ಆಗಬಾರದು ಎನ್ನುವುದು ನನ್ನ ಬಯಕೆ. ಕಾವ್ಯಾಳ ಪಾತ್ರ ಸಿಕ್ಕಾಪಟ್ಟೆ ಚಾಲೆಂಜಿಂಗ್ ಇದೆ ಅಂತ ನನಗೆ ಅನ್ನಿಸಿದೆ. ಇದನ್ನು ಮೆಚ್ಚಿ ದೀರ್ಘಕಾಲದ ನಂತರ ಕನ್ನಡದಲ್ಲಿ ಅಭಿನಯಿಸುತ್ತಿದ್ದೇನೆ. ಅಡ್ವೊಕೇಟ್ ಪಾತ್ರವನ್ನು ಮಾಡಿರಲಿಲ್ಲ. ಪಾತ್ರದ ಜೊತೆಗೆ ಹೊಸ ಹೊಸ ಸಂಗತಿಯನ್ನು ಕಲಿಯುತ್ತೇವೆ.

ಇಲ್ಲಿನ ಕಥಾನಾಯಕ ತುಂಬಾ ಶ್ರೀಮಂತ. ಅವನ ಜೀವನ ಶೈಲಿ ಭಿನ್ನ. ಕಲಾವಿದರ ಮನೆತನದವಳು ಕಾವ್ಯಾ. ಅವಳ ತಾಯಿ ಭರತನಾಟ್ಯ ಪ್ರವೀಣೆ. ಜೀವ ದೊಡ್ಡ ನಿರ್ಮಾಪಕ. ಕಾವ್ಯಾಗೂ– ಜೀವನಿಗೂ ಆಗುವುದಿಲ್ಲ, ಇವರ ನಡುವೆ ಅಂತಸ್ತು– ಗುಣ ಎಲ್ಲದರಲ್ಲೂ ವೈರುಧ್ಯ. ಇಬ್ಬರ ನಡುವೆ ತುಂಬ ಸಂಘರ್ಷ ಇರುತ್ತೆ. ಆದರೂ ಅವರಿಬ್ಬರೂ ಹೇಗೆ ಒಂದಾಗುತ್ತಾರೆ ಎನ್ನುವುದೇ ಕಥೆಯ ಸ್ವಾರಸ್ಯ.

**◆ ಚಾಲೆಂಜಿಂಗ್ ಅನ್ನುವುದನ್ನು ಹೇಗೆ ಪರಿಗಣಿಸುತ್ತೀರಿ?**

ಕಲಾವಿದರಿಗೆ ಒಂದು ದೊಡ್ಡ ಭಾಗ್ಯ ಎಂದರೆ ವಿವಿಧ ವೃತ್ತಿ, ಧರ್ಮ, ಸಾಮಾಜಿಕ ವ್ಯಕ್ತಿತ್ವಗಳನ್ನು ಪ್ರತಿನಿಧಿಸುತ್ತಾರೆ. ನನಗೂ ವೈದ್ಯೆ ಆಗಬೇಕು ಎನ್ನುವ ಕನಸಿತ್ತು ಓದಿಲ್ಲ, ಆದರೆ ಪಾತ್ರದಲ್ಲಿ ಅದಾಗುತ್ತೇನೆ. ಚಾಲೆಂಜಿಂಗ್ ಎಂದರೆ ಪರ್ಫಾರ್ಮ್‌ಗೆ ಹೆಚ್ಚು ಅವಕಾವಿರಬೇಕು. ಮೊದಲೆಲ್ಲಾ ಧಾರಾವಾಹಿಗಳು ಶೋಷಣೆಯ ಮುಖವನ್ನು ಮಾತ್ರ ಬಿಂಬಿಸುತ್ತಿದ್ದವು. ಈಗ ಆ ಹಂತವನ್ನು ಮೀರಿದೆ, ಅಂದರೆ ಶೋಷಣೆಯನ್ನು ಪ್ರಶ್ನಿಸುವ ಮನೋಭಾವ ಬೆಳೆದಿದೆ. ಇಲ್ಲಿನ ಕಾವ್ಯಾ ಕೂಡ ಸಂಕೀರ್ಣ ಪಾತ್ರ. ಇಲ್ಲಿ ಕುಟುಂಬ– ಕೋರ್ಟ್ ಹೀಗೆ ಭಿನ್ನ ನೆಲೆಯಲ್ಲಿ ಆಕೆ ಅನಾವರಣ ಆಗುತ್ತಾಳೆ.

**◆ ಮಾಡೆಲಿಂಗ್– ಅಭಿನಯದ ತಯಾರಿ ಹೇಗಿರಬೇಕು?**

ಮಾಡೆಲಿಂಗ್ ನನ್ನ ಪ್ರಕಾರ ಸುಲಭ. 3 ತಿಂಗಳು ತರಬೇತಿ ಪಡೆದರೆ ಯಾರಾದರೂ ಮಾಡಬಹುದು. ಅಭಿನಯ ಹಾಗಲ್ಲ ಜೀವನಪರ್ಯಂತ ಕಲಿಯಬೇಕು. ಕಲಿಯಲು ಇದು ಹೇಳಿಕೊಡುವ ವಿದ್ಯೆಯೂ ಅಲ್ಲ. ಅದನ್ನು ನಿತ್ಯ ಕೆಲಸದಿಂದ ರೂಢಿಸಿಕೊಳ್ಳಬೇಕು. ಆರಂಭದಲ್ಲಿ ತುಂಬಾ ಜನ ನನಗೆ ಬೈದವರಿದ್ದಾರೆ. ಇಂತಹವರನ್ನು ಏತಕ್ಕೆ ಹಾಕಿಕೊಂಡಿದ್ದೀರಿ ಎಂದು ಹೀಗಳೆದವರೂ ಇದ್ದಾರೆ. ಇನ್ನೂ ಕೆಲವರು ಎಲ್ಲರೂ ಕಲಿತುಕೊಂಡು ಬಂದಿರುವುದಿಲ್ಲ. ಇಲ್ಲೇ ಕಲಿಯಬೇಕು ಎಂದು ಪ್ರೋತ್ಸಾಹಿಸಿದವರೂ ಇದ್ದಾರೆ. ಚಿತ್ರೀಕರಣದ ಮೊದಲ ದಿನ ಇದೆಲ್ಲ ನನಗೆ ವರ್ಕೌಟ್ ಆಗಲ್ಲ ಮಾಡೆಲಿಂಗ್ ಮಾಡುವುದೇ ವಾಸಿ ಎಂದುಕೊಂಡಿದ್ದೆ. ಆದರೆ ಬಣ್ಣದ ಮೋಹ ನನ್ನನ್ನು ಬಿಡಲಿಲ್ಲ. ನನ್ನ ಕೈಯಲ್ಲಿ ಎಷ್ಟು ದಿನ ಸಾಧ್ಯವೋ ಅಷ್ಟು ದಿನ ನೋಡೋಣ ಎಂದು ಮುಂದುವರಿದೆ. ಅದು ಬಿಡುವು ಇಲ್ಲದಂತೆ ಇಲ್ಲಿಯವರೆಗೂ ಕರೆದುಕೊಂಡು ಬಂದಿದೆ.

**◆ ನಮ್ಮ ಜೀವನ ಹೇಗಿದೆ? ಸಮಯ ಹೇಗೆ ನೀಭಾಯಿಸುತ್ತಿದ್ದೀರಿ?**

ಈಗ ತಮಿಳಿನಲ್ಲಿಯೂ ಒಂದು ಧಾರಾವಾಹಿ ಮಾಡುತ್ತಿದ್ದರಿಂದ ಎರಡಕ್ಕೂ ಸಮಯ ನೀಡಬೇಕು. 15 ದಿನ ಚೆನ್ನೈಯಲ್ಲಿದ್ದರೆ 15 ದಿನ ಬೆಂಗಳೂರಿನಲ್ಲಿ ಇರುತ್ತೇನೆ. ಮೇ 7ಕ್ಕೆ ಮದುವೆಯಾಗಿ ಒಂದು ವರ್ಷ ತುಂಬುತ್ತದೆ. ಪತಿ ರಾಕೇಶ್ ತುಂಬ ಬೆಂಬಲಿಸುತ್ತಾರೆ. ಅಮ್ಮನ ಮನೆ, ಅತ್ತೆ ಮನೆಯನ್ನು ಹೇಗೆ ನಿರ್ವಹಿಸುತ್ತಿದ್ದೇನೆ ಎನ್ನುವುದೇ ಗೊತ್ತಾಗುತ್ತಿಲ್ಲ. ಈ ಧಾರಾವಾಹಿ ಮೊನ್ನೆ ಸೋಮವಾರದಿಂದ ಪ್ರದರ್ಶನವಾಗುತ್ತಿದೆ. ಪ್ರಮೋಷನ್ ಕಾರ್ಯಕ್ರಮಗಳಿಗಾಗಿ ರಾಜ್ಯ ಸುತ್ತಿದ್ದೇವೆ. ಇವತ್ತು ರಾತ್ರಿ ಮನೆಗೆ ಹೋದೆ ಅಂದರೆ ಬೆಳಿಗ್ಗೆ ನಾನು ಹುಬ್ಬಳ್ಳಿಗೆ ಹೋಗುತ್ತೇನೆ ಎಂದರೆ, ಅತ್ತೆ– ಮಾವ ನನಗೆ ಬೇಕಾಗುವ ವ್ಯವಸ್ಥೆ ಮಾಡುತ್ತಾರೆ. ಒಟ್ಟಾರೆ ನನ್ನ ಪಾಡಿಗೆ ನನ್ನನ್ನು ಬಿಟ್ಟಿದ್ದಾರೆ. ಈ ರೀತಿಯ ಬೆಂಬಲ ಸಿಕ್ಕರೆ ಬೇಕಾಗಿದ್ದನ್ನು ಸಾಧಿಸಬಹುದು ಎನ್ನುವುದು ನನ್ನ ಭಾವನೆ.

■ ರಾಘವೇಂದ್ರ ಕೆ.